# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1810
2. ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
3. ಉತ್ತರಿಸಬೇಕಾದ ದಿನಾಂಕ : 24.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಎಷ್ಟು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಇ-ಹರಾಜು ಪ್ರಕ್ರಿಯೆ ನಡೆಯುತ್ತಿದೆ; ಭಾರತ ಸರ್ಕಾರದ ಇ-ನ್ಯಾಮ್ ಮತ್ತು ಕರ್ನಾಟಕ ಸರ್ಕಾರದ ಇ-ಮಾರ್ಕೆಟ್ ವ್ಯವಸ್ಥೆಯಲ್ಲಿನ ವ್ಯತ್ಯಾಸಗಳೇನು; | ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪೈಕಿ 160 ಮಾರುಕಟ್ಟೆಗಳಲ್ಲಿ ಆನ್‌ಲೈನ್ ಮೂಲಕ ವ್ಯಾಪಾರ ವಹಿವಾಟು ನಡೆಯುತ್ತಿದೆ.<br><br>ಕರ್ನಾಟಕ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಗೆ ಸುಧಾರಣೆ ತರುವ ನಿಟ್ಟಿನಲ್ಲಿ 2013ರಲ್ಲಿ ಕೃಷಿ ಮಾರಾಟ ನೀತಿಯನ್ನು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಜಾರಿಗೆ ತಂದಿದೆ. ಸರ್ಕಾರ ಜಾರಿಗೊಳಿಸಿದ ಕರ್ನಾಟಕ ಕೃಷಿ ಮಾರಾಟ ನೀತಿಯನ್ವಯ ಕೃಷಿ ಉತ್ಪನ್ನ ಮಾರಾಟಕ್ಕಾಗಿ ಅಗತ್ಯ ತಂತ್ರಜ್ಞಾನ ಅಳವಡಿಸಲ್ಪಟ್ಟಿದೆ. ಅದಕ್ಕಾಗಿ ಜನವರಿ, 2014ರಲ್ಲಿ ವಿಶೇಷ ಸಾಂಸ್ಥಿಕ ಸಂಸ್ಥೆ ರೆಮ್ಸ್‌ನ್ನು ಸ್ಥಾಪಿಸಲಾಗಿದೆ.<br><br>ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸ್ಥಾಪನೆಯಾಗಿರುವ ಏಕೀಕೃತ ಮಾರುಕಟ್ಟೆ ವೇದಿಕೆ(ಯುಎಂಪಿ) ಯಲ್ಲಿನ ಆನ್‌ಲೈನ್ ಮೂಲಕ ಮಾರಾಟವಾಗುವ ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುವಂತ ಅವಕಾಶ ಕಲ್ಪಿಸಲಾಗಿದೆ. ವ್ಯಾಪಾರ ವಹಿವಾಟಿನ ಎಲ್ಲಾ ಹಂತಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಮಾರಾಟ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಸರಳತೆ ಮತ್ತು ದಕ್ಷತೆ ಹೆಚ್ಚಿದೆ. ಸರ್ಕಾರ ಜಾರಿಗೊಳಿಸಿದ ಈ ಕ್ರಮಗಳಿಂದಾಗಿ ಮಾರುಕಟ್ಟೆ ಸಮಿತಿಗಳು ಮತ್ತಷ್ಟು ರೈತ ಸ್ನೇಹಿಯಾಗಿವೆ.<br><br>ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ಮಾರುಕಟ್ಟೆಗಳಲ್ಲಿ ನೂತನ ಮಾರಾಟ ವ್ಯವಸ್ಥೆ ಜಾರಿಗೆ ತಂದ ಪ್ರಥಮ ರಾಜ್ಯ ಕರ್ನಾಟಕ. ಇದನ್ನು **"ಕರ್ನಾಟಕ ಮಾಡಲ್"** ಎಂದು ಕೇಂದ್ರ ಸರ್ಕಾರ ಘೋಷಿಸಿತ್ತು. ಈ ಯೋಜನೆಯನ್ನು ರಾಷ್ಟ್ರಮಟ್ಟದಲ್ಲಿ ಜಾರಿಗೆ ತರುವ ಹಿನ್ನೆಲೆಯಲ್ಲಿ 2015ರ ಜುಲೈ 9 ಮತ್ತು 10ರಂದು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ನಡೆಸಿ, ಆನ್‌ಲೈನ್ ಇ-ಟೆಂಡರ್ ಅನುಕೂಲಗಳು, ಕರ್ನಾಟಕ ಕೃಷಿ ಮಾರಾಟ ನೀತಿ-2013 ಮತ್ತು ಸುಧಾರಣೆಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಅಂದಿನ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ಮತ್ತು 26 ರಾಜ್ಯಗಳ ಕೃಷಿ ಮಂತ್ರಿಗಳು / ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. |

....2

| | | |
|---|---|---|
| | | ತದನಂತರ, ಕರ್ನಾಟಕ ಕೃಷಿ ಮಾರಕಟ್ಟೆ ಸುಧಾರಣೆ ಮಾದರಿಯಲ್ಲಿ ಕೇಂದ್ರ ಸರ್ಕಾರ 2016ರ ಏಪ್ರಿಲ್‌ನಲ್ಲಿ ಇ-ನ್ಯಾಮ್ ವೇದಿಕೆ ಸ್ಥಾಪನೆಯಾಗಿದೆ.<br><br>ರಾಜ್ಯದಲ್ಲಿ ರೆಮ್ಸ್ ಸಂಸ್ಥೆ ಮೂಲಕ ಅನುಷ್ಠಾನಗೊಂಡಿರುವ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಕೆಳಕಂಡ ಸೌಲಭ್ಯಗಳು ದೊರೆಯುತ್ತವೆ.<br><br>• ಏಕೀಕೃತ ಮಾರುಕಟ್ಟೆ ವೇದಿಕೆ ತಂತ್ರಜ್ಞಾನದ ಮೂಲಕ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಜೋಡಣೆ ಮಾಡಿ, ಉತ್ಪನ್ನಗಳ ಖರೀದಿಗೆ ಆನ್‌ಲೈನ್ ಇ-ಟೆಂಡರ್ ಪದ್ಧತಿಯನ್ನು ಅನುಷ್ಠಾನಗೊಳಿಸಿದೆ. ಈ ಹಿಂದೆ ವ್ಯಾಪಾರಸ್ಥರು ಕೇವಲ ಒಂದು ಮಾರುಕಟ್ಟೆಯಲ್ಲಿನ ವ್ಯಾಪಾರ ವಹಿವಾಟಿನಲ್ಲಿ ಮಾತ್ರ ಭಾಗವಹಿಸಲು ಸಾಧ್ಯವಾಗಿತ್ತು. ಆದರೆ ಈಗ ಆನ್‌ಲೈನ್ ಮಾರುಕಟ್ಟೆ ವೇದಿಕೆಯಿಂದಾಗಿ ವರ್ತಕರು ರಾಜ್ಯದ ಯಾವುದೇ ಭಾಗದಿಂದಲೂ ಆನ್‌ಲೈನ್ ಇ-ಟೆಂಡರ್‌ನಲ್ಲಿ ಉತ್ಪನ್ನಗಳ ಖರೀದಿಗಾಗಿ ಬಿಡ್ ಮಾಡಬಹುದಾಗಿದೆ. ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಖರೀದಿದಾರರು ಭಾಗವಹಿಸಲು ಹಿಂದೆ ಇದ್ದ ಲೈಸೆನ್ಸ್ ನಿಬಂಧನೆಗಳನ್ನು ಸರಳೀಕರಣಗೊಳಿಸಿ, ರಾಜ್ಯಾದ್ಯಂತ ಒಂದೇ ಲೈಸೆನ್ಸ್ (ಏಕೀಕೃತ ಲೈಸೆನ್ಸ್) ಅಡಿಯಲ್ಲಿ ಖರೀದಿದಾರರು ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ವ್ಯಾಪಾರ ವಹಿವಾಟಿನಲ್ಲಿ ಭಾಗವಹಿಸಲು ಅವಕಾಶಿಸಿದೆ. ಮಾರುಕಟ್ಟೆಗಳಿಗೆ ಆವಕವಾಗುವ ಪ್ರತಿಯೊಂದು ಉತ್ಪನ್ನದ ಮಾಹಿತಿಯನ್ನು ಗಣಕೀಕರಣಗೊಳಿಸಿ ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ)ಯಲ್ಲಿ ಖರೀದಿದಾರರ ಅನುಕೂಲಕ್ಕಾಗಿ ಪ್ರಸಾರ ಮಾಡಲಾಗುತ್ತಿದೆ.<br><br>• ರೈತರು ಉತ್ಪನ್ನವನ್ನು ಮಾರುಕಟ್ಟೆಗೆ ತಂದ ವೇಳೆಯಿಂದ ಮಾರುಕಟ್ಟೆ ಗೇಟ್ ಪ್ರವೇಶದಲ್ಲಿ ಉತ್ಪನ್ನಗಳ ನಮೂದನೆಯಿಂದ ಹಿಡಿದು ಉತ್ಪನ್ನಗಳ ಮಾರಾಟ ಪ್ರಕ್ರಿಯೆಗಳು ಪೂರ್ಣಗೊಳ್ಳುವವರೆಗೆ ಎಲ್ಲಾ ಹಂತದ ಪ್ರಕ್ರಿಯೆಗಳನ್ನು ಗಣಕೀಕರಣಗೊಳಿಸಲಾಗುವುದು. ಉತ್ಪನ್ನಗಳನ್ನು ವಿದ್ಯುನ್ಮಾನ ಯಂತ್ರಗಳ ಮೂಲಕ ತೂಕ ಮಾಡುವುದು, ಉತ್ಪನ್ನಕ್ಕೆ ದೊರೆತ ಬೆಲೆ ಇತ್ಯಾದಿ ಮಾಹಿತಿಗಳ ಬಗ್ಗೆ ರೈತರಿಗೆ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸುವುದು, ಇ-ಟೆಂಡರ್ ವಿಜೇತರ ಪಟ್ಟಿ ಪ್ರಕಟಿಸುವುದು, ರೈತರ ಉತ್ಪನ್ನಗಳಿಗೆ ಉಚಿತ ಗುಣವಿಶ್ಲೇಷಣೆ ಸೇವೆ ಸೌಲಭ್ಯ ಕಲ್ಪಿಸುವುದು, ಖರೀದಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ವರ್ತಕರಿಗೆ ಇ-ಪರ್ಮಿಟ್ ಸೌಲಭ್ಯ ಕಲ್ಪಿಸುವುದು ಸೇರಿದಂತೆ ವ್ಯವಹಾರದ ಪ್ರಕ್ರಿಯೆಗಳನ್ನು ಸಂಪೂರ್ಣ ಗಣಕೀಕೃತಗೊಳಿಸಿ ನಿರ್ವಹಣೆ ಮಾಡುವ ಹೊಣೆಗಾರಿಕೆಯನ್ನು ಏಕೀಕೃತ ಮಾರುಕಟ್ಟೆ ವೇದಿಕೆ(ಯುಎಂಪಿ) ಹೊಂದಿದೆ.<br><br>• ಮಾರುಕಟ್ಟೆ ಸಮಿತಿಗಳಲ್ಲಿ ವ್ಯಾಪಾರ ದಿನದಂದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಿಡ್ ವಿಜೇತರ ಪಟ್ಟಿ ಪ್ರಕಟ |

....3

ಮಾಡಲಾಗುತ್ತದೆ. ಟೆಂಡರ್‌ನಲ್ಲಿ ಲಭ್ಯವಾದ ಧಾರಣೆಗೆ ಒಪ್ಪಿಗೆ ನೀಡುವುದು ಅಥವಾ ನಿರಾಕರಿಸುವ ಅವಕಾಶ ರೈತರಿಗೆ ನೀಡಲಾಗಿದೆ. ರೈತರು ತಮ್ಮ ಉತ್ಪನ್ನಕ್ಕೆ ದೊರೆತ ಧಾರಣೆಗೆ ಸಮ್ಮತಿ ಸೂಚಿಸಿದಲ್ಲಿ ಮುಂದಿನ ಪ್ರಕ್ರಿಯೆಗಳಿಗೆ ಚಾಲನೆ ನೀಡಲಾಗುವುದು. ಇಲ್ಲವಾದರೆ ಮರುದಿನ ಅಥವಾ ನಂತರದ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ.

- ಕೃಷಿ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಶುಲ್ಕ ಗಣಕೀಕರಣ, ಲೆಕ್ಕ ತೀರುವಳಿ ಪಟ್ಟಿಗಳ ಸಿದ್ದಪಡಿಸುವುದು, ಏಕೀಕೃತ ಮಾರುಕಟ್ಟೆ ವೇದಿಕೆಯಡಿ ಡಿಸಿಬಿ ವರದಿಗಳನ್ನು ಸಿದ್ಧಪಡಿಸುವುದು, ಮಾರುಕಟ್ಟೆ ಎಲ್ಲಾ ವಹಿವಾಟುಗಳ ದತ್ತಾಂಶ ಶೇಖರಣೆ ಏಕೀಕೃತ ಮಾರುಕಟ್ಟೆ ವೇದಿಕೆಯಡಿ (ಯುಎಂಪಿ) ನಡೆಯುತ್ತದೆ.
- ಆನ್‌ಲೈನ್ ರೈತ ನೋಂದಣಿಯಲ್ಲಿ, ರೈತರ ಮೊಬೈಲ್ ಸಂಖ್ಯೆ ವಿವರಗಳನ್ನು ಪಡೆಯಲಾಗುತ್ತಿದ್ದು, ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ನಿರ್ಧಾರ ಕೈಗೊಳ್ಳುವ ಪೂರ್ವದಲ್ಲಿ ಮಾರುಕಟ್ಟೆಗಳಲ್ಲಿ ಪ್ರಚಲಿತವಿರುವ ಉತ್ಪನ್ನಗಳ ಧಾರಣೆಯ ವಿವರವನ್ನು ಮತ್ತು ರೈತರು ಉತ್ಪನ್ನದ ಲಾಟ್‌ನ ವಿವರ, ಆನ್‌ಲೈನ್ ಬಿಡ್‌ನಲ್ಲಿನ ಬೆಲೆಗಳ ಮಾಹಿತಿ, ಮಾರಾಟ ಮೌಲ್ಯದ ವಿವರಗಳನ್ನು ಎಸ್‌ಎಂಎಸ್ ಮೂಲಕ ನೀಡಲಾಗುವುದು. ರೈತರು ಮಾರಾಟಕ್ಕೆ ತರುವ ಉತ್ಪನ್ನಗಳ ತೂಕ, ಗುಣ ವಿಶ್ಲೇಷಣೆ, ವರ್ಗೀಕರಣ, ಇವುಗಳ ವಿವರ ಪಡೆಯಲು ಅವಕಾಶವಿದೆ. ಮಾರುಕಟ್ಟೆಗಳಲ್ಲಿನ ಬೆಲೆಗಳ ಮಾಹಿತಿ ದೊರೆಯುವುದರಿಂದ ಉತ್ತಮ ಧಾರಣೆ ದೊರೆಯುವವರೆಗೆ ರೈತರು ಮಾರಾಟ ಪ್ರಕ್ರಿಯೆ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿದೆ. ರೈತರ ಅನುಕೂಲಕ್ಕಾಗಿ " ರೈತರ ಮೊಬೈಲ್ ಆ್ಯಪ್" ಅಭಿವೃದ್ಧಿ ಪಡಿಸಲಾಗಿದೆ. ಈ ಆ್ಯಪ್‌ನಲ್ಲಿ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ರೈತರು ಪಡೆಯಬಹುದಾಗಿದೆ.

**ಇ-ನ್ಯಾಮ್ (National Agriculture Market) :**

ಭಾರತ ಸರ್ಕಾರ ಇ-ನ್ಯಾಮ್ ವೇದಿಕೆಯನ್ನು ದೇಶದ ಎಲ್ಲಾ ಮಾರುಕಟ್ಟೆಗಳಿಗೆ ವಿಸ್ತರಿಸಲು ಏಕರೂಪ ಪ್ಯಾಕೇಜ್‌ನಂತೆ ಅಭಿವೃದ್ಧಿಪಡಿಸಿದೆ. ಆದರೆ ಈಗಾಗಲೇ ಕರ್ನಾಟಕ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಚಾಲ್ತಿಯಲ್ಲಿರುವ ವಿಭಿನ್ನ ಒಳನಿಯಮಗಳು ಮತ್ತು ಅಭ್ಯಾಸಗಳ ನಿಖರ ಅವಶ್ಯಕತೆಗಳಿಗೆ ಇ-ನ್ಯಾಮ್ ತಂತ್ರಾಂಶ ಹೊಂದಾಣಿಕೆ ಮಾಡಬೇಕಿದೆ. ಮತ್ತೊಂದೆಡೆ, ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ) ಕರ್ನಾಟಕ ಮಾರುಕಟ್ಟೆಗಳಿಗೆ ತಡೆರಹಿತ ಮಾರುಕಟ್ಟೆ ಕಾರ್ಯಾಚರಣೆಗಳನ್ನು ನಿರ್ವಹಿಸಲು ಕಸ್ಟಮೈಸ್ ಮಾಡಬೇಕಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಏಕೀಕೃತ ಮಾರುಕಟ್ಟೆ ವೇದಿಕೆ(ಯುಎಂಪಿ) ಮತ್ತು ಇ-ನ್ಯಾಮ್ ತಂತ್ರಾಂಶಗಳನ್ನು ಜೋಡಣೆ (Interoperability) ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ. Interoperability ಸಾಕಾರಗೊಳಿಸಲು 4 ಸಭೆಗಳನ್ನು ನಡೆಸಲಾಯಿತು.

....4

ಪ್ರಾಯೋಗಿಕವಾಗಿ ಎರಡು ವೇದಿಕೆಗಳ ತಂತ್ರಾಂಶ ಜೋಡಣೆಯನ್ನು ಫೆಬ್ರವರಿ 2020 ರಂದು ಅನುಷ್ಠಾನಗೊಳಿಸಲಾಗಿದೆ. ನಾಲ್ಕೂ ಸಭೆಗಳಲ್ಲಿ ಚರ್ಚಿಸಿದಂತೆ ಏಕೀಕೃತ ಮಾರುಕಟ್ಟೆ ವೇದಿಕೆ(ಯುಎಂಪಿ) ಮತ್ತು ಇ-ನ್ಯಾಮ್ ವೇದಿಕೆಗಳಲ್ಲಿ ವ್ಯತ್ಯಾಸಗಳು ಈ ಕೆಳಕಂಡಂತಿವೆ.

**ಪ್ರಸ್ತುತ ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಲಭ್ಯವಿರುವ ತಾಂತ್ರಿಕ ಸೌಲಭ್ಯಗಳನ್ನು ಇ-ನ್ಯಾಮ್ ತಂತ್ರಾಂಶದಲ್ಲಿ ಅಳವಡಿಸಲು ಕೋರಲಾಗಿದೆ :**

1. **ಅಸೆಯಿಂಗ್ (ಗುಣ ಮೌಲ್ಯಮಾಪನ):** ಪ್ರಸ್ತುತ ಇ-ನ್ಯಾಮ್ ವೇದಿಕೆಯಲ್ಲಿ ಗುಣ ಮೌಲ್ಯಮಾಪನ ಮಾಡಲಾದ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡಲಾಗುತ್ತದೆ. ವರ್ತಕರು ಪ್ರತಿಯೊಂದು ಲಾಟಿನ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಆದ್ದರಿಂದ ಗುಣವಿಶ್ಲೇಷಣಾ ನಿಯತಾಂಕಗಳನ್ನು ಲಾಟಿನ ಮುಂದೆ ಬಿಡ್ಡಿಂಗ್ ಸ್ಕ್ರೀನ್‌ನಲ್ಲಿ ಪ್ರದರ್ಶಿಸುವುದು.
2. **ಇ-ಪರ್ಮಿಟ್:** ಕೇಂದ್ರೀಕೃತ ಇ-ಪರ್ಮಿಟ್ ಒದಗಿಸಲು ಹಾಗೂ ದಾಸ್ತಾನು ಮಾಹಿತಿಗಾಗಿ ದಲ್ಲಾಲರು ಮತ್ತು ವರ್ತಕರ ಖಾತೆ ಪುಸ್ತಕವನ್ನು ಒದಗಿಸುವುದು, ಇದರಿಂದ ವರ್ತಕರು ವಿದ್ಯುನ್ಮಾನ ಮೂಲ ಪರ್ಮಿಟ್ ಅನ್ನು ಪಡೆದುಕೊಳ್ಳಬಹುದು. ಈ ಕ್ರಮದಿಂದ ಅಂತರ್ ರಾಜ್ಯಗಳ ನಡುವಿನ ವಹಿವಾಟು ಹೆಚ್ಚಲಿದೆ.
3. **ಡಿಸಿಬಿ:** ಮಾರುಕಟ್ಟೆ ಭಾಗೀದಾರರಿಂದ ಸಲ್ಲಿಸಬೇಕಾದ ಶುಲ್ಕ ವಿವರಕ್ಕಾಗಿ ಕೃಷಿ ಮಾರುಕಟ್ಟೆಯಲ್ಲಿ ಪ್ರತಿ ಮಾರುಕಟ್ಟೆಯ ಬೇಡಿಕೆ ಸಂಗ್ರಹ ಮತ್ತು ಬಾಕಿ ಪುಸ್ತಕವನ್ನು ಕಲ್ಪಿಸಬೇಕಿದೆ. ಇದ್ದರಿಂದ ಮಾರುಕಟ್ಟೆ ಶುಲ್ಕ ಸಂಗ್ರಹದ ಮೇಲೆ ನಿಗಾ ಮತ್ತು ಶುಲ್ಕ ಸಂಗ್ರಹಕ್ಕೆ ಉಪಯುಕ್ತವಾಗಲಿದೆ.
4. **ದಲ್ಲಾಲರಿಂದ ಲಾಟ್ ಎಂಟ್ರಿ:** ಸಾಮಾನ್ಯ ದಿನಗಳಲ್ಲಿ, ಉತ್ಪನ್ನ ಮಾರುಕಟ್ಟೆಗೆ ಪ್ರವೇಶಿಸಿಸುವ ದ್ವಾರದಲ್ಲಿ ಲಾಟ್‌ಎಂಟ್ರಿಯನ್ನು ಮಾಡಲಾಗುತ್ತದೆ, ಅತಿಹೆಚ್ಚು ಲಾಟ್ ಆವಕವಾಗುವ ಸಮಯದಲ್ಲಿ, ನಿಗದಿತ ಸಮಯದಲ್ಲಿ ಟೆಂಡರ್ ಡಿಕ್ಲೇರ್ ಮಾಡುವ ಸಲುವಾಗಿ ದಲ್ಲಾಲರಿಂದ ಕೂಡ ಲಾಟ್‌ಎಂಟ್ರಿ ಮಾಡುವ ವ್ಯವಸ್ಥೆಯನ್ನು ಒದಗಿಸಬೇಕಿದೆ.
5. **ಸ್ಥಳೀಯ ಭಾಷೆ:** ತಂತ್ರಾಶದ ಎಲ್ಲಾ ಹಂತದ ಅಂದರೆ. ಎಸ್‌ಎಂಎಸ್ ಸಂದೇಶ, ಗೇಟ್‌ಎಂಟ್ರಿ, ವಿಕ್ರೀಪಟ್ಟಿ, ಇತರೆ ಎಲ್ಲಾ ಮಾಹಿತಿಗಳನ್ನು ಸ್ಥಳೀಯ ಕನ್ನಡ ಭಾಷೆಯಲ್ಲಿ ಒದಗಿಸಬೇಕಿದೆ.
6. ವಹಿವಾಟು ಶುಲ್ಕ, ದಂಡ ಶುಲ್ಕ ಸಂಗ್ರಹಕ್ಕೆ ಇ-ನ್ಯಾಮ್ ವೇದಿಕೆಯಲ್ಲಿ ಅವಕಾಶ ನೀಡುವುದು, ಸಂಸ್ಕರಣಾ ಘಟಕ, ಸಂಘಗಳು, ನೇರ ಖರೀದಿ ಕೇಂದ್ರಗಳಿಗೆ ಮಾರುಕಟ್ಟೆ ಶುಲ್ಕ ವಿನಾಯಿತಿ ಸೌಲಭ್ಯ ಕಲ್ಪಿಸಬೇಕಿದೆ.

....5

| | | |
|---|---|---|
| | | 7. **ಆನ್‌ಲೈನ್ ಹಣಪಾವತಿ:** ಪ್ರಸ್ತುತ ರಾಜ್ಯದ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ಮಾರಾಟ ನಡೆದ ದಿನದಲ್ಲಿ ರೈತನಿಗೆ ಆನ್‌ಲೈನ್ ಮೂಲಕ ಹಣ ಪಾವತಿಯಾಗುತ್ತಿದೆ. ಆದರೆ, ಇ–ನ್ಯಾಮ್ ವೇದಿಕೆಯಲ್ಲಿ ಮಂಡಿ ಅಧಿಕಾರಿಗಳು ಚಲನ್ ನೀಡಿದ ಬಳಿಕ ಹಣಪಾವತಿ ಪದ್ಧತಿ ಅನುಸರಿಸಲಾಗುತ್ತಿದೆ. ಈ ವ್ಯವಸ್ಥೆಯಿಂದಾಗಿ ಒಂದು ವೇಳೆ ಚೆಕ್‌ಬೌನ್ಸ್ ಆದರೆ ರೈತರಿಗೆ ಹಣ ಪಾವತಿಯಲ್ಲಿ ವಿಳಂಬವಾಗುತ್ತದೆ.<br>8. **ಇತರೆ ವ್ಯವಹಾರಗಳ ಅವಶ್ಯಕತೆ:**<br>• ಅಭ್ಯಾಸಬಲದಿಂದ ವರ್ತಕರು ಲೋಕಲ್ ಲಾಟ್‌ಕೋಡ್‌ನ್ನು ಬಳಸುತ್ತಾರೆ, ಆದ್ದರಿಂದ, ತಂತ್ರಾಂಶದಲ್ಲಿ ರಚಿತವಾದ ಯುನಿಕ್ ಸಂಖ್ಯೆಯ ಜೊತೆ ಲೋಕಲ್ ಕೋಡ್‌ನ್ನು ಮ್ಯಾಪ್ ಮಾಡಬೇಕಾಗಿರುತ್ತದೆ.<br>• ಇ–ನ್ಯಾಮ್ ತಂತ್ರಾಂಶದ ಬಿಡ್ಡಿಂಗ್ ಪರದೆಯಲ್ಲಿ ಗುಣವಿಶ್ಲೇಷಣೆ ಮಾಡಿದ ಹಾಗೂ ಗುಣವಿಶ್ಲೇಷಣೆ ಮಾಡದ ಲಾಟ್‌ಗಳನ್ನು ಗುರುತಿಸಲು ಅವಕಾಶ ಕಲ್ಪಿಸಬೇಕಿದೆ.<br>• **ಒಪ್ಪಂದಿತ ಮಾತುಕತೆ ವಹಿವಾಟು:**<br>ಇ–ಟೆಂಡರ್‌ನಲ್ಲಿ ಲಭ್ಯವಾದ ಧಾರಣೆಗಿಂತ ಹೆಚ್ಚು ಬೆಲೆಯನ್ನು ರೈತರಿಗೆ ನೀಡಲು ಖರೀದಿದಾರ ಬಯಸಿದಲ್ಲಿ, ಮಾರಾಟ ಮಾಡಲು ರೈತರಿಗೆ ಅವಕಾಶ ಕಲ್ಪಿಸುವುದು, ಈ ಕ್ರಮದಿಂದಾಗಿ, ರೈತ ತನ್ನ ಉತ್ಪನ್ನಕ್ಕೆ ಹೆಚ್ಚು ಧಾರಣೆ ಪಡೆಯಲು ಅವಕಾಶವಾಗಲಿದೆ. ವರ್ತಕ /ಖರೀದಿದಾರನು ತನಗೆ ಅಗತ್ಯವಿರುವ ಉತ್ಪನ್ನವನ್ನು ಖರೀದಿಸಲು ಅವಕಾಶ ನೀಡಿದಂತಾಗಲಿದೆ.<br>• ಪ್ರಸ್ತುತ ಇ–ನ್ಯಾಮ್ ವೇದಿಕೆಯಲ್ಲಿ ರೈತರ ಉತ್ಪನ್ನ ಮಾರಾಟಕ್ಕಾಗಿ ತಂದ ವೇಳೆಯಲ್ಲಿ ಲಾಟ್ ಎಂಟ್ರಿ ಹಾಗೂ ಗುಣವಿಶ್ಲೇಷಣೆಗಾಗಿ ಮಾರುಕಟ್ಟೆ ಅಧಿಕಾರಿಯ ಅನುಮೋದನೆಗೆ ಒಳಪಟ್ಟಿದೆ, ಈ ಅನುಮೋದನೆ ಹಂತವನ್ನು ತೆಗೆದು ಹಾಕಬೇಕಿದೆ. |
| ಆ. | ಭಾರತ ಸರ್ಕಾರದ ಇ–ನ್ಯಾಮ್ ವ್ಯವಸ್ಥೆಯನ್ನು ಅಳವಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ; ಇಲ್ಲವಾದಲ್ಲಿ, ಕಾರಣಗಳೇನು; | • ಪ್ರಸ್ತುತ ಕಲಬುರಗಿ ಮತ್ತು ಚಿಂಚೋಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಇ–ನ್ಯಾಮ್ ವ್ಯವಸ್ಥೆ ಜಾರಿಗೆ ಕ್ರಮ ವಹಿಸಲಾಗುತ್ತಿದೆ.<br>• ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ) ತಂತ್ರಾಂಶದೊಂದಿಗೆ ಇ–ನ್ಯಾಮ್ ವೇದಿಕೆಯನ್ನು ಸೂಕ್ತವಾಗಿ Interoperability ಮಾಡುವ ಸಂಬಂಧ ಕ್ರಮ ವಹಿಸಲಾಗಿದೆ. ಪ್ರಾಯೋಗಿಕವಾಗಿ ಎರಡು ವೇದಿಕೆಗಳ ತಂತ್ರಾಂಶ ಜೋಡಣೆಯನ್ನು ಫೆಬ್ರವರಿ, 2020 ರಂದು ಅನುಷ್ಠಾನಗೊಳಿಸಲಾಗಿದೆ. |

....6

| | | |
|---|---|---|
| ಇ. | ರಾಜ್ಯದಲ್ಲಿ ಒಟ್ಟು ಎಷ್ಟು ಕೃಷಿ ಉತ್ಪನ್ನ ಮಾರುಕಟ್ಟೆಗಳಿವೆ; ಅದರಲ್ಲಿ ಎಷ್ಟು ಮಾರುಕಟ್ಟೆಗಳು ಮಾರುಕಟ್ಟೆ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಅಳವಡಿಸಿಕೊಂಡಿದೆ. ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಿದೆ. |

ಸಂಖ್ಯೆ: ಸಇ 163 ಎಂಆರ್‌ಇ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

## ಅನುಬಂಧ

## ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಿವರ

| ಕ್ರಸಂ | ಸಮಿತಿಗಳ ಹೆಸರು |
|---|---|
| 1 | **ಬೆಂಗಳೂರು ಗ್ರಾಮಾಂತರ:**<br>ದೊಡ್ಡಬಳ್ಳಾಪುರ |
| 2 | ಹೊಸಕೋಟೆ |
| 3 | **ರಾಮನಗರ ಜಿಲ್ಲೆ:-**<br>ರಾಮನಗರ |
| 4 | ಚನ್ನಪಟ್ಟಣ |
| 5 | ಕನಕಪುರ |
| 6 | **ಚಿತ್ರದುರ್ಗ ಜಿಲ್ಲೆ:**<br>ಚಿತ್ರದುರ್ಗ |
| 7 | ಚಳ್ಳಕೆರೆ |
| 8 | ರಾಂಪುರ |
| 9 | ಹಿರಿಯೂರು |
| 10 | ಹೊಸದುರ್ಗ |
| 11 | ಹೊಳಲ್ಕೆರೆ |
| 12 | **ದಾವಣಗೆರೆ ಜಿಲ್ಲೆ :**<br>ದಾವಣಗೆರೆ |
| 13 | ಜಗಳೂರು |
| 14 | ಹರಿಹರ |
| 15 | ಹೊನ್ನಾಳಿ |
| 16 | ಚನ್ನಗಿರಿ |
| 17 | **ಕೋಲಾರ ಜಿಲ್ಲೆ:**<br>ಕೋಲಾರ |
| 18 | ಮಾಲೂರು |
| 19 | ಬಂಗಾರಪೇಟೆ |
| 20 | ಮುಳಬಾಗಿಲು |
| 21 | ಶ್ರೀನಿವಾಸಪುರ |
| 22 | **ಚಿಕ್ಕಬಳ್ಳಾಪುರ ಜಿಲ್ಲೆ:**<br>ಚಿಕ್ಕಬಳ್ಳಾಪುರ |

| | |
|---|---|
| 23 | ಗೌರಿಬಿದನೂರು |
| 24 | ಬಾಗೇಪಲ್ಲಿ |
| 25 | ಚಿಂತಾಮಣಿ |
| 26 | **ಶಿವಮೊಗ್ಗ ಜಿಲ್ಲೆ:**<br>ಶಿವಮೊಗ್ಗ |
| 27 | ತೀರ್ಥಹಳ್ಳಿ |
| 28 | ಸಾಗರ |
| 29 | ಸೊರಬ |
| 30 | ಹೊಸನಗರ |
| 31 | ಶಿಕಾರಿಪುರ |
| 32 | ಭದ್ರಾವತಿ |
| 33 | **ತುಮಕೂರು ಜಿಲ್ಲೆ:**<br>ತುಮಕೂರು |
| 34 | ಕೊರಟಗೆರೆ |
| 35 | ಗುಬ್ಬಿ |
| 36 | ಹುಳಿಯಾರು |
| 37 | ಕುಣಿಗಲ್ |
| 38 | ಮಧುಗಿರಿ |
| 39 | ಪಾವಗಡ |
| 40 | ಶಿರಾ |
| 41 | ತುರುವೇಕೆರೆ |
| 42 | ತಿಪಟೂರು |
| 43 | **ಮೈಸೂರು ಜಿಲ್ಲೆ:**<br>ಮೈಸೂರು |
| 44 | ಕೃಷ್ಣರಾಜನಗರ |
| 45 | ಹುಣಸೂರು |
| 46 | ಪಿರಿಯಾಪಟ್ಟಣ |
| 47 | ಟಿ.ನರಸೀಪುರ |
| 48 | ನಂಜನಗೂಡು |
| 49 | ಸಂತೆಸರಗೂರು |
| 50 | **ಚಾಮರಾಜನಗರ ಜಿಲ್ಲೆ:**<br>ಚಾಮರಾಜನಗರ |
| 51 | ಗುಂಡ್ಲುಪೇಟೆ |
| 52 | ಕೊಳ್ಳೇಗಾಲ |
| 53 | **ದಕ್ಷಿಣಕನ್ನಡ ಜಿಲ್ಲೆ:** |

| | |
|---|---|
| | ಮಂಗಳೂರು |
| 54 | ಭಂಟ್ವಾಳ |
| 55 | ಪುತ್ತೂರು |
| 56 | ಸುಳ್ಯ |
| 57 | ಬೆಳ್ತಂಗಡಿ |
| 58 | **ಉಡುಪಿ ಜಿಲ್ಲೆ:**<br>ಉಡುಪಿ |
| 59 | ಕುಂದಾಪುರ |
| 60 | ಕಾರ್ಕಳ |
| 61 | **ಕೊಡಗು ಜಿಲ್ಲೆ**<br>ಮಡಿಕೇರಿ |
| 62 | ಸೋಮವಾರಪೇಟೆ<br>(ಕೇಂದ್ರಸ್ಥಾನ ಕುಶಾಲನಗರ) |
| 63 | ಗೋಣಿಕೊಪ್ಪಲ್ |
| 64 | **ಚಿಕ್ಕಮಗಳೂರು ಜಿಲ್ಲೆ:**<br>ಚಿಕ್ಕಮಗಳೂರು |
| 65 | ಕಡೂರು |
| 66 | ತರೀಕೆರೆ |
| 67 | ಮೂಡಿಗೆರೆ |
| 68 | ಶೃಂಗೇರಿ |
| 69 | ಕೊಪ್ಪ |
| 70 | **ಹಾಸನ ಜಿಲ್ಲೆ:**<br>ಹಾಸನ |
| 71 | ಬೇಲೂರು |
| 72 | ಅರಸೀಕೆರೆ |
| 73 | ಹೊಳೆನರಸೀಪುರ |
| 74 | ಅರಕಲಗೂಡು |
| 75 | ಚನ್ನರಾಯಪಟ್ಟಣ |
| 76 | ಸಕಲೇಶಪುರ |
| 77 | **ಮಂಡ್ಯಜಿಲ್ಲೆ:**<br>ಮಂಡ್ಯ |
| 78 | ಶ್ರೀರಂಗಪಟ್ಟಣ |
| 79 | ಮದ್ದೂರು |
| 80 | ಮಳವಳ್ಳಿ |
| 81 | ಕೆ.ಆರ್.ಪೇಟೆ |

| | |
|---|---|
| 82 | ನಾಗಮಂಗಲ |
| 83 | ಪಾಂಡವಪುರ |
| 84 | **ಬೆಳಗಾವಿ ಜಿಲ್ಲೆ:**<br>ಬೆಳಗಾವಿ |
| 85 | ಬೈಲಹೊಂಗಲ |
| 86 | ಅಥಣಿ |
| 87 | ಗೋಕಾಕ್ |
| 88 | ಕುಡಚಿ |
| 89 | ನಂದಗಡ |
| 90 | ನಿಪ್ಪಾಣಿ |
| 91 | ರಾಮದುರ್ಗ |
| 92 | ಸೌದತ್ತಿ |
| 93 | ಸಂಕೇಶ್ವರ |
| 94 | **ಬಿಜಾಪುರ ಜಿಲ್ಲೆ:**<br>ಬಿಜಾಪುರ |
| 95 | ಸಿಂಧಗಿ |
| 96 | ಇಂಡಿ |
| 97 | ತಾಳಿಕೋಟೆ |
| 98 | **ಬಾಗಲಕೋಟೆ ಜಿಲ್ಲೆ:**<br>ಬಾಗಲಕೊಟೆ |
| 99 | ಬೀಳಗಿ |
| 100 | ಬಾದಾಮಿ |
| 101 | ಹುನಗುಂದ |
| 102 | ಜಮಖಂಡಿ |
| 103 | ಮಹಾಲಿಂಗಪುರ |
| 104 | **ಧಾರವಾಡ ಜಿಲ್ಲೆ:**<br>ಧಾರವಾಡ |
| 105 | ಅಣ್ಣಿಗೇರಿ |
| 106 | ಹುಬ್ಬಳ್ಳಿ |
| 107 | ಕುಂದಗೋಳ |
| 108 | ಕಲಘಟಗಿ |
| 109 | **ಗದಗ ಜಿಲ್ಲೆ:**<br>ಗದಗ |
| 110 | ಮುಂಡರಗಿ |
| 111 | ನರಗುಂದ |

| | |
|---|---|
| 112 | ರೋಣ<br>(ಕೇಂದ್ರಸ್ಥಾನ ಹೊಳೆಆಲೂರು) |
| 113 | ಲಕ್ಷ್ಮೇಶ್ವರ |
| 114 | **ಹಾವೇರಿ ಜಿಲ್ಲೆ:**<br>ಹಾವೇರಿ |
| 115 | ಹಿರೇಕರೂರು |
| 116 | ರಾಣಿಬೆನ್ನೂರು |
| 117 | ಬ್ಯಾಡಗಿ |
| 118 | ಸವಣೂರು |
| 119 | ಹಾನಗಲ್ |
| 120 | ಶಿಗ್ಗಾಂವ್ |
| 121 | **ಉತ್ತರಕನ್ನಡ ಜಿಲ್ಲೆ:**<br>ಹಳಿಯಾಳ |
| 122 | ಕುಮಟಾ |
| 123 | ಹೊನ್ನಾವರ |
| 124 | ಸಿದ್ದಾಪುರ |
| 125 | ಯಲ್ಲಾಪುರ |
| 126 | ಶಿರಸಿ |
| 127 | ಮುಂಡಗೋಡ |
| 128 | ಕಾರವಾರ |
| 129 | **ಗುಲ್ಬರ್ಗಾ ಜಿಲ್ಲೆ:**<br>ಗುಲ್ಬರ್ಗಾ |
| 130 | ಅಫಜಲ್ಪುರ |
| 131 | ಅಳಂದ |
| 132 | ಜೇವರ್ಗಿ |
| 133 | ಚಿತ್ತಾಪುರ |
| 134 | ಸೇಡಂ |
| 135 | ಚಿಂಚೋಳಿ |
| 136 | **ಯಾದಗಿರಿ ಜಿಲ್ಲೆ :**<br>ಯಾದಗಿರಿ |
| 137 | ಶಹಾಪುರ |
| 138 | ಶೋರಾಪುರ |
| 139 | **ಬಳ್ಳಾರಿ ಜಿಲ್ಲೆ:**<br>ಬಳ್ಳಾರಿ |
| 140 | ಹರಪನಹಳ್ಳಿ |

| | |
|---|---|
| 141 | ಸಂಡೂರು |
| 142 | ಕೊಟ್ಟೂರು |
| 143 | ಹೊಸಪೇಟೆ |
| 144 | ಹೆಚ್.ಬಿ.ಹಳ್ಳಿ |
| 145 | ಹಡಗಲಿ |
| 146 | ಸಿರುಗುಪ್ಪ |
| 147 | **ಬೀದರ್ ಜಿಲ್ಲೆ:**<br>ಬೀದರ್ |
| 148 | ಹುಮ್ನಾಬಾದ್ |
| 149 | ಬಸವಕಲ್ಯಾಣ |
| 150 | ಭಾಲ್ಕಿ |
| 151 | ಔರಾದ್ |
| 152 | **ರಾಯಚೂರು ಜಿಲ್ಲೆ:** |
| | ರಾಯಚೂರು |
| 153 | ಲಿಂಗಸೂಗೂರು |
| 154 | ಮಾನ್ವಿ |
| 155 | ಸಿಂಧನೂರು |
| 156 | **ಕೊಪ್ಪಳ ಜಿಲ್ಲೆ:**<br>ಕೊಪ್ಪಳ |
| 157 | ಗಂಗಾವತಿ |
| 159 | ಭತ್ತ ಮತ್ತು ಅಕ್ಕಿ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರಟಗಿ |
| 159 | ಯಲ್ಬುರ್ಗಾ<br>(ಕೇಂದ್ರಸ್ಥಾನ ಕೂಕನೂರು) |
| 160 | ಕುಷ್ಟಗಿ |